ಪ್ರೀತಿಯ ತುಸು ಸವಿಯನ್ನೂ ಕಾಣದೆ ಮೃಗದ ರೀತಿ ಬೆಳೆದು ಮಿದುಳು ವಿಕಾಸವಾಗದೆ ಜಡವಾಗಿ ಸೋಮಾರಿಯಾಯಿತು. ಅವಳನ್ನು ಜರೆದು, ಬಯ್ದು ಅವಳ ಮುಖಕ್ಕೆ ಮಸಿ ಬಳಿಯುವಂತೆ ಮಂಥರೆ ಎಂದು ಹೆಸರಿಸಿದರು. ಆ ಜನರ ಮನದ ವಿಕೃತಿಯ ಕನ್ನಡಿಯ ಪ್ರತಿಬಿಂಬವೆಂಬಂತೆ ಅವಳ ಮೈ ವಿಡಂಬನೆಗೆ ಒಳಗಾಗುವಂತೆ ಬೆಳೆಯಿತು.

ಕಾಲದ ಹೊಳೆ ಹರಿದು ಸಾಗಿತು. ನಿಂದೆಯಲ್ಲಿಯೇ ಬೆಳೆದ ಕುಬ್ಜೆಯು ದೊಡ್ಡವಳಾದಳು. ಕೇಕಯ ರಾಜ ಸತಿಗೆ ಕೈಕೆ ಪುತ್ರಿ ಹುಟ್ಟಿದಳು. ತಾನು ಕನಿಕರಿಸಿ ತಂದ ಮಂಥರೆಗೆ ಅರಮನೆಯಲ್ಲಿ ಯಾರಿಂದಲೂ ಕರುಣೆ ಪ್ರೀತಿ ದೊರಕದ್ದನ್ನು ಕಂಡು ರಾಜ ಲೋಕದ ಜನರ ವರ್ತನೆಗೆ ಅಚ್ಚರಿಗೊಂಡನು. ಅವಳ ಒಂಟಿತನ ಅವನ ಮರುಕದ ಮನವನ್ನು ಸದಾ ಕಾಡುತ್ತಿತ್ತು. ಆ ಭೀಷಣ ಏಕಾಂತತೆಯನ್ನು ದೂರವಾಗಿಸಲು ಅವಳನ್ನು ತನ್ನ ಮುದ್ದು ಮಗುವನ್ನು ಆಡಿಸುವ ಕೆಲಸಕ್ಕೆ ನೇಮಿಸಿದನು.

ಅದು ಮಂಥರೆಯ ಮರಳುಗಾಡಿನ ಬಾಳಿಗೆ ಮಳೆ ಹೊಯ್ದಂತಾಯಿತು. ಅವಳು ಅದುವರೆಗು ಒಂಟಿತನದಿಂದ ಬಿಗಿ ಹಿಡಿದು ಬಾಡಿದಂತಿದ್ದ ಶಿಶಿರಕಾಲ ಕಳೆದು ಚೈತ್ರನಾಗಮನವಾಯ್ತು. ಅವಳ ಬಾಳಿನ ರಾತ್ರಿಯಲ್ಲಿ ಶಶಿ ಉದಯಿಸಿದಂತಾಯಿತು. ಅವಳ ಮೃತ್ಯುವಿಗೆ ಅಮೃತ ಸೇಚನೆಯಾಯಿತು. ರಾಜಕುವರಿ ಕೈಕೆಯ ಪ್ರೇಮ ಸೌಂದರ್ಯ ಮಹಿಮೆಯಿಂದ ಅವಳ ಒಂಟಿತನದ ಶುಷ್ಕ ಶೂನ್ಯತೆಯಲ್ಲಿ ಪ್ರೀತಿ ಸಂಚರಿಸಿತು. ಬದುಕು ಮಧುರವಾಗಿ ಸಾರ್ಥಕವಾಯಿತು. ರೂಪ ವಿಹೀನೆಯಾದ ಅವಳು ರೂಪವೇ ಮೈವೆತ್ತ ಕೂಸನ್ನು ಮುದ್ದು ಮಾಡಿ ತೂಗಾಡಿದಳು. ಹಾಲಿನಲ್ಲಿ ಇದ್ದಲಿನ ಚೂರು ತೇಲುವಂತೆ ಅದರ ಚೆಲುವಿನಲ್ಲಿ ತೊನೆದಾಡಿದಳು. ಕಾಳಸರ್ಪದ ಹೆಡೆಯಲ್ಲಿ ಹೊಳೆಯುವ ಮಣಿಯಂತೆ ಮಂಥರೆಯ ತೊಡೆಯಲ್ಲಿ ಕೈಕೆ ಮೆರೆದಳು.

ಚಕ್ಕಮಕ್ಕಿ ಕಲ್ಲಿನ ಅಂತರ್ಯದಲ್ಲಿ ಅಗ್ನಿ ಗುಪ್ತವಾಗಿರುವಂತೆ– ಬಾಹ್ಯ ವಿಕೃತಿಯ ಮಧ್ಯೆ ಮಂಥರೆಯ ಹೃದಯದಲ್ಲಿ ಸುಪ್ತವಾಗಿದ್ದ ಚೆಲುವು ಒಲವುಗಳ ಚಿಲುಮೆ ಒಮ್ಮೆಲೇ ಕಣ್ದೆರೆಯಿತು. ದಡಕ್ಕನೆ ಮುತ್ತಿನಹಾರ ಹರಿದು ಚೆಲ್ಲಾಡಿ ಥಳಥಳಿಸುವಂತೆ ಅವಳ ಆನಂದ ಚಿಮ್ಮಿಹರಿಯಿತು. ಅವಳ ಜೀವಿತಕ್ಕೆ ರಾಜ ಪುತ್ರಿಯೆ ಸರ್ವಸುಖವಾದಳು. ಆಗ ಆಕೆ ತನಗಾಗಿದ್ದ ಅನ್ಯಾಯ ಅಪಮಾನವನ್ನು ಮರೆತಳು. ಜೊತೆಗೆ ಕೈಕೆಯ ಅನ್ಯೋನ್ಯ ಸಂಯೋಗದಲ್ಲಿ ತನ್ನನ್ನು ತಾನೇ ಮರೆತಳು!

ಮಂಥರೆ ಈ ರೀತಿ ಬದುಕುತ್ತಿರಲು ಅಚ್ಚರಿಯೆಂಬಂತೆ ಅವಳ ಬಾಲ್ಯ, ಕೌಮಾರ್ಯ, ಯೌವ್ವನಗಳು ಕಳೆದು ಹೋದವು. ಕೂದಲು ನರೆಯಿತು. ದೇಹಕ್ಕೆ ಸುಕ್ಕಡರಿತು. ಹೊರ ಮೈಯ ವಿಕೃತಿ ಹೆಚ್ಚುತ್ತಿದ್ದಂತೆ ಅವಳಿಗೆ ಕೈಕೆಯ ಮೇಲಿನ ಮಮತೆ ನೂರ್ಮಡಿಯಾಯಿತು.

* * * *

ಕೈಕೆಯು ನರ ತಿರಸ್ಕೃತೆ ವಿಕೃತೆ ಮಂಥರಾ ದಾಸಿಯನ್ನು ಶೈಶವ ಕೃತಜ್ಞತಾ ಪ್ರೇಮದಿಂದ ಪ್ರೀತಿಸುತ್ತಿದ್ದಳು. ಅವಳು ಮನ್ಮಥನ ಹೊಸ ಕಾಂತಿಯ ಹೊಳೆ ಹೊಳೆವ ಪುಷ್ಪದಂತೆ ಯೌವನ ಭರಿತಳಾದಳು. ಅವಳ ಲೋಕ ಮೋಹಕ ಸೊಬಗಿನ ಸುಳಿಗೆ ದಶರಥ ಸಿಕ್ಕಿಕೊಂಡನು. ಅವಳನ್ನು ಮದುವೆಯಾದನು. ಆಗ ಅವಳ ನೆರಳಿನಂತೆ ದಾಸಿ ಮಂಥರೆಯು ಕೋಸಲಕ್ಕೆ ಬಂದಳು. ರವಿ ವಂಶದ ಅರಸರ ಊರಾದರೂನು ಕುರೂಪತೆಗೆ ಮನ್ನಣೆ ದೊರೆಯಲಿಲ್ಲ. ಮುದಿ ಗೂನಿಗೆ ಸಂತೋಷ ಮೊಲದ ಕೋಡಾಯಿತು.

ಅಲ್ಲಿಯ ಜನ ಶನಿಯೆಂದು ಶಪಿಸಿದರು. ಮೊಸಳೆಯನ್ನು ಕಂಡಂತೆ ಹುಬ್ಬುಗಂಟಿಕ್ಕಿ ದೂರ ಸರಿದರು. ಅವಳ ಗಾಳಿ ಸೋಕಿದರೆ ಮೈಲಿಗೆಯಾವುವದೆಂದು ಹತ್ತಿರಕ್ಕೆ ಸೇರಿಸದಾದರು. ಈಶ್ವರಾಧನೆಗೆ ಹತ್ತಿರ ಬಿಟ್ಟುಕೊಳ್ಳುತ್ತಿರಲಿಲ್ಲ. ದಾಸಿಯರು ಕಿರಿಯ ರಾಣಿಯ ಆಜ್ಞೆಗೆ ಕಿವುಡಾಗಿ ನಿರ್ಲಕ್ಷಿಸುತ್ತಿದ್ದರು. ಊಟಕ್ಕೆ ಇಡುವ ಹೊತ್ತಿನಲ್ಲಿ ಹೊರಕ್ಕೆ ನೂಕುತ್ತಿದ್ದರು.

ಕೌಸಲ್ಯೆ ಸುಮಿತ್ರೆಯರು ಗೂನಿ ಮಂಥರೆಯನ್ನು ಅನಿಷ್ಟೆ ಎಂದು ಹೆದರಿ ಅಸಹ್ಯಪಡುತ್ತಿದ್ದರು. ಅವಳ ಜೊತೆಗಿದ್ದ ಕೈಕೆಯನ್ನು ಹತ್ತಿರ ಸೇರಿಸುತ್ತಿರಲಿಲ್ಲ! ಒಡತಿಯ ಒಳಿತಿಗಾಗಿ ಜೀವನವನ್ನೇ ಸಮರ್ಪಿಸಿದ ಆ ಕುಬ್ಜೆ ಕಮ್ಮಾರನ ಅಡಿಗಲ್ಲಿನಂತೆ ಎಲ್ಲ ಅವಮಾನದ ಹೊಡೆತವನ್ನು ಸಹಿಸಿಕೊಂಡಳು.

ಕೈಕೆಗೆ ಭರತ ಹುಟ್ಟಿದ ಮೇಲೆ ಮಂಥರೆಗೆ ಮೂರನೆಯ ಕಣ್ಣು ಮೂಡಿದಂತಾಯಿತು. ಅಂದಿನಿಂದ ಅವಳ ಬಾಳಿನಲ್ಲಿ ಹೊಸ ಪ್ರೀತಿಯ ಚೆಂದಳಿರು ಚಿಗುರಿತು, ಜಿಪುಣ ಬಸವನು ಚಿನ್ನವನ್ನು ಅಪ್ಪಿಕೊಳ್ಳುವಂತೆ ಆ ಕಂದನನ್ನು ಅಪ್ಪಿಕೊಂಡಳು. ಹಡೆದ ತಾಯಿಯೆ ನಾಚುವಂತೆ ಶಿಶು ಭರತನನ್ನು ಹಗಲಿರುಳು ಸಲಹಿದಳು. ಆಕೆಯ ಮೋಹ ಸರೋವರದಲ್ಲಿ ಭರತನು ತಾವರೆಯಾಗಿ ಬೆಳೆದನು.

ಉಳಿದ ಮಕ್ಕಳಾದ ಶ್ರೀರಾಮ, ಲಕ್ಷ್ಮಣ, ಶತ್ರುಘ್ನರು ಅವರ ತಾಯಿಯರು ಮತ್ತು ದಾಸಿಯರ ಅಕ್ಕರೆಯಲ್ಲಿ ಬೆಳೆದರು. ನಾಲ್ವರು ಬಾಲಕರು ಗುರು ವಸಿಷ್ಠನ ಬಳಿಯಲ್ಲಿ ಸೂಕ್ತ ವಿದ್ಯಾಭ್ಯಾಸ ಪಡೆದು ದಶರಥನ ನಾಲ್ಕು ತೋಳುಗಳಂತೆ ಬೆಳೆದರು.

ಕೋಸಲದಲ್ಲಿ ಗೂನಿ ಮಂಥರೆಗಿಂತ ಅತಿ ತಿರಸ್ಕೃತಳಾಗಲಿ, ಸಂತೃಪ್ತ ಸುಖಿಯಾಗಲಿ ಮತ್ತೊಬ್ಬರಿರಲಿಲ್ಲ. ಭರತ ಅಭ್ಯುದಯ ಚಂದ್ರೋದಯಕ್ಕೆ ಅವಳ ಎದೆ ಉಬ್ಬಿತು. ಹಾಳು ಕೊರಕಲು ಬಂಡೆಯಂತೆ ವಕ್ರವಾಗಿ, ಒರಟು ದಡದಂತೆ ಇದ್ದ ಅವಳ ಮೈಯನ್ನು ಉಬ್ಬುಬ್ಬಿ ಮೇಲಕ್ಕೆದ್ದ (ಉಚ್ಛ್ವಸಿತ) ಹರ್ಷದಲೆಗಳ ಸಮೂಹವು ಅಪ್ಪಳಿಸಿ ಮುಚ್ಚಿದವು. ಮಂಥರೆಯ ಲೋಕದಲ್ಲಿ ಕೈಕೆ ಭರತನನ್ನು ಹೊರತುಪಡಿಸಿ ಬೇರೆ ಯಾವ ನರರೂ ಇರಲಿಲ್ಲ. ದಶರಥ, ಕೋಸಲ, ಅಯೋಧ್ಯೆಗಳು ಕೈಕೆ ಭರತರಿಗಾಗಿ, ಸೂರ್ಯ, ಚಂದ್ರ, ತಾರೆಗಳು ಕೈಕೆ ಭರತರಿಗಾಗಿ; ಈ ಪೃಥ್ವಿ ಭರತನ ಆಳ್ವಿಕೆಗಾಗಿ! ಎಂದು ಅವಳ ಮಮತೆಯ ಸುಳಿಯಲ್ಲಿ ಸುತ್ತುತ್ತಿದ್ದವು. ಆ ಸುಳಿಯಲ್ಲಿ ಸಿಕ್ಕಿದ ಮಹಾ ತ್ರೇತಾಯುಗವು ಸುಂಟರಗಾಳಿಯ ಧೂಳಿನಲ್ಲಿ ಸಿಕ್ಕ ತರಗೆಲೆಯಂತೆ ತಿರುಗದೆ ಇರುತ್ತದೆಯೆ?

****

ನವ ವಧುವರರಾದ ಸೀತೆ ಮತ್ತು ಶ್ರೀರಾಮರು ಶೃಂಗಾರರಸದಲ್ಲಿ ಒಂದಾಗಿದ್ದರು. ರಾಮ ಸೀತೆಯರ ಬಾಳಿನ ದೋಣಿಯು ಸವಿಯಾದ ಹಾಲು ಜೇನಿನಲ್ಲಿ ತೇಲಾಡುತ್ತಿತ್ತು. ಆ ರಸ ದೋಣಿ ಮಂಥರೆಯ ಸುಳಿಗೆ ಸಿಕ್ಕಿ ದಡಕ್ಕನೆ ಮುಳುಗಿತು. ಆ ಸುಖ ನೌಕೆ ಮುಳುಗಲು, ಅದನ್ನು ಮುಳುಗಿಸಿದ ಸುಳಿಯೆ ಸುಂಟರ ಗಾಳಿಯಾಗಿ ತಿರ್ರನೆ ತಿರುಗಿಸಿ ಆ ಸುಖಿಗಳನ್ನು ಆಗಸಕ್ಕೆ ಎಸೆಯಿತು.

ಕಡೆಯದೆ ಬೆಣ್ಣೆ ಹೊಮ್ಮುವುದೆ? ಮಂಥರೆಯ ಭರತನ ಮೇಲಿನ ಮಮತೆ ವಾಸುಕಿಯೆಂಬ ಸರ್ಪ. ಅದು ಕೈಕೆಯನ್ನು ಮಂದಾರ ಪರ್ವತವಾಗಿಸಿ ಆ ತ್ರೇತಾಯುಗ ಸಮುದ್ರವನ್ನು ಕಡೆಯಿತು.

****

ಒಂದು ರಾತ್ರಿ ಅಯೋಧ್ಯೆಯ ಜನರು ಆಗಸದಲ್ಲಿ ಧೂಮಕೇತುವನ್ನು ಕಂಡರು. ಅದನ್ನು ನೋಡಿದ ದಶರಥ ಅಪಶಕುನವೆಂದು ತಿಳಿದನು. ಅದು ತನ್ನ ದೈವದ ಅಂತ್ಯಲಿಪಿ ಎಂದು ಭಾವಿಸಿದನು. ಹಿರಿಯ ಮಗನಾದ ರಾಮಚಂದ್ರನಿಗೆ ಬೇಗ ಪಟ್ಟಕಟ್ಟಲು ನಿಶ್ಚಯಿಸಿದನು. ಗುರುಗಳನ್ನು, ಸಚಿವರನ್ನು, ಪ್ರಜೆಗಳನ್ನು ಕರೆಸಿ ತನ್ನ ರಾಜ್ಯ ಭಾರದ ಹೊರೆಯನ್ನು ರಾಮನ ಹೆಗಲ ಮೇಲಿರಿಸಿ ತಾನು ಪಾರಲೌಕಿಕ ಸಾಧನೆಯಲ್ಲಿ ನಿರತನಾಗುವ ಅಪೇಕ್ಷೆ ತಿಳಿಸಿದನು. ಅವರೆಲ್ಲರು ಅದಕ್ಕೆ ಒಪ್ಪಿಗೆ ಸೂಚಿಸಿದರು. ಆಗ ಅಭಿಷೇಕಕ್ಕೆ ಅಣಿ ಮಾಡಲು ವಸಿಷ್ಠಾದಿ ಗುರುಗಳಿಗೆ ಅರಿಕೆ ಮಾಡಿಕೊಂಡನು.

ಅದೇ ಸಮಯದಲ್ಲಿ ರಾವಣನ ವಿಧಿಯು ಮಂಥರೆಯ ಮನಸ್ಸಿನಲ್ಲಿ ತನ್ನ ತಂತ್ರದ ಜಾಲವನ್ನು ಕನಸಾಗಿ ರೂಪಿಸಿತು. ಆ ಸ್ವಪ್ನದಲ್ಲಿ ಮುದುಕಿಯಾದ ಕೈಕೆ ವಿಧವೆಯಂತೆ ಭರತನ ಕೈ ಹಿಡಿದು ಮರುಭೂಮಿಯಲ್ಲಿ ಅಲೆಯುತ್ತಿದ್ದಳು. ಗೂನಿ ಮಂಥರೆ ಎಷ್ಟು ಕರೆದರೂ ಓಗೊಡಲಿಲ್ಲ. ಮಗನೊಡನೆ ಮುಂದುವರಿದ ಅವಳನ್ನು ಕತ್ತಲೆ ನುಂಗಿ ಹಾಕಿತು. ಮಂಥರೆ ಸುತ್ತಿ ಬಳಲಿ ಬಾಯಾರಿಕೆಯಿಂದ ರಾಮನನ್ನು ಕೂಗಿ ಕರೆದಳು!

ಆ ಕ್ರೂರ ಕನಸಿಗೆ ಎಚ್ಚೆತ್ತ, ಮಂಥರೆ ಜೇಡಬಲೆಯೊಳಗೆ ಬಿದ್ದ ಹುಳದಂತೆ

## ನಿಯತ್ತು

ನಿಯತ್ತಿಗೆ ಹೆಸರಾದ ನಾಯಿ
ಮನೆಯ ಹೊರಗಿರುತ್ತದೆ
ಕದ್ದು ತಿನ್ನುವ ಬೆಕ್ಕು
ಮನೆಯ ಒಳಗಿರುತ್ತದೆ!

★ ಪಿ.ಜಯವಂತ ಪೈ ಕುಂದಾಪುರ

